**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 3/2021 ಪಿ.ಡಬ್ಲ್ಯೂಃ 11

ಸಿ.ಡಬ್ಲ್ಯೂಃ 24

| | |
|---|---|
| ಸಾಕ್ಷಿದಾರರ ಹೆಸರು | ಹರೀಶ್ |
| ತಂದೆಯ ಹೆಸರು | ದಿಃ ಸೋಮಯ್ಯ |
| ವಯಸ್ಸು | 58 ವರ್ಷ |
| ಉದ್ಯೋಗ | ಸಹಾಯಕ ಇಂಜಿನಿಯರ್ , ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ |
| ವಿಳಾಸ | ಉಡುಪಿ |

ದಿನಾಂಕಃ 07-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು 2005 ರಿಂದ 2021 ರವರೆಗೆ ಉಡುಪಿ ಉಪವಿಭಾಗದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಎಂದು ಸೇವೆ ಸಲ್ಲಿಸಿದ್ದೇನೆ.

2) ಪಡುಬಿದ್ರೆ ಠಾಣೆಯ ಗುನ್ನೆ ನಂಬ್ರ 33/2020 ರಲ್ಲಿ ತಾರೀಕು 27-05-2020 ರಂದು ಚಾಸಾ-32 ಇವರು ತೋರಿಸಿದ ಜಾಗೆಗಳನ್ನು ನೋಡಿ, ಅವುಗಳ ನಕಾಶೆ ಮಾಡಿ, ಕೊಟ್ಟಿದ್ದೇನೆ. ಸದರಿ ನಕಾಶೆಗಳನ್ನು ಈಗ ನೋಡಿ ಅವುಗಳನ್ನು **ನಿಶಾನೆ ಪಿ-24 ಮತ್ತು 25** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-24(ಎ) ಮತ್ತು 25(ಎ) ಎಂದು ಗುರುತಿಸಿದ್ದೇನೆ.

**ಪಾಟೀಸವಾಲುಃ ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ**

1) ನಾನು ನಿಪಿ-24 ಮತ್ತು 25 ರ ಜಾಗೆಗಳನ್ನು ಭೇಟಿ ಮಾಡಿದ ಸಮಯ ಈಗ ನೆನಪಿಲ್ಲ. ಅವುಗಳನ್ನು ಮಧ್ಯಾಹ್ನಕ್ಕಿಂತ ಮೊದಲೇ ಹೋಗಿ ನೋಡಿದ್ದೆ. ನಿಪಿ-24 ಮತ್ತು 25 ಕ್ಕಾಗಿ ನಾನು ಕೋರಿಕೆಯನ್ನು ನಾನು 24-05-2020 ರಂದು ಪಡೆದಿದ್ದೆ.

ನಿಶಾನೆ ಪಿ-24 ಮತ್ತು 25 ಇವುಗಳನ್ನು ನಾನು ನನ್ನ ಕಚೇರಿಯಲ್ಲಿ ಬರೆದಿದ್ದೆ. ಅವುಗಳನ್ನು ಬರೆದ ದಿನವೇ ತನಿಖಾಧಿಕಾರಿಗೆ ಕೊಟ್ಟಿದ್ದೆ. ನಾನು ನಿಪಿ-24 ಮತ್ತು 25 ಇವುಗಳಿಗಾಗಿ ಆ ಜಾಗೆಗಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ನಮ್ಮ ಕಚೇರಿಯಲ್ಲಿಯೇ ಪೊಲೀಸರ ಹೇಳಿಕೆಯಂತೆ ಬರೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ-24 ಮತ್ತು 25ರ ನಕಾಶೆಯಲ್ಲಿ ಸುತ್ತಮುತ್ತಲಿನ ವಿವರಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ